

# ಮತ್ತೊಂದು ಎನ್‌ಟಿಆರ್ ಪಿಕ್ಚರ್!

ತೆಲುಗಿನಲ್ಲಿ ಈಗ ತಾರೆಗಳ ಜೀವನಾಧಾರಿತ ಸಿನಿಮಾಗಳ ಉಬ್ಬರ ಕಾಲ. 2018ರಲ್ಲಿ ತೆರೆಕಂಡಿದ್ದ, ನಟಿ ಸಾವಿತ್ರಿ ಬದುಕನ್ನು ಆಧರಿಸಿದ 'ಮಹಾನಟಿ' ಸಿನಿಮಾ ಸಾಕಷ್ಟು ಮೆಚ್ಚುಗೆ ಗಳಿಸಿತ್ತು. ಈ ವರ್ಷಾರಂಭಕ್ಕೆ (ಜನವರಿ 9) ಬಿಡುಗಡೆಯಾಗಿದ್ದ ತೆಲುಗಿನ 'ಎನ್.ಟಿ.ಆರ್. ಕಥಾನಾಯಕುಡು' ಸಿನಿಮಾ ಕೂಡ ಮಿಶ್ರ ಪ್ರತಿಕ್ರಿಯೆಯೊಂದಿಗೆ ಪ್ರದರ್ಶನ ಕಾಣುತ್ತಿದೆ. ಎನ್‌ಟಿಆರ್ ಪಾತ್ರಕ್ಕೆ ಅವರ ಮಗ ನಂದಮೂರಿ ಬಾಲಕೃಷ್ಣ ಜೀವ ತುಂಬಿರುವುದು ಚಿತ್ರದ ವಿಶೇಷ.

ಇದೀಗ ಎನ್‌ಟಿಆರ್ ಬದುಕನ್ನು ಇನ್ನೊಂದು ದಿಕ್ಕಿನಿಂದ ಚಿತ್ರಿಸುವ ಪ್ರಯತ್ನ ನಡೆಯುತ್ತಿದೆ. ಎನ್‌ಟಿಆರ್ ತಮ್ಮ 70ನೇ ವಯಸ್ಸಿನಲ್ಲಿ 35 ವರ್ಷದ ಲಕ್ಷ್ಮಿ ಪಾರ್ವತಿ ಅವರನ್ನು ಮದುವೆಯಾಗಿದ್ದರು. ಲಕ್ಷ್ಮಿ ಪಾರ್ವತಿ ಅವರ ಮನಸ್ಸಿನಲ್ಲಿ ಇರುವ ಎನ್‌ಟಿಆರ್ ಬಿಂಬ ಎಂಥದ್ದು? ಈ ಕುತೂಹಲವನ್ನು ತೆರೆಯ ಮೇಲೆ ತಣಿಸಲು ಹೊರಟಿದ್ದಾರೆ ರಾಮ್‌ಗೋಪಾಲ್ ವರ್ಮ. ಈ ಸಿನಿಮಾ ಹೆಸರು 'ಲಕ್ಷ್ಮೀಸ್ ಎನ್‌ಟಿಆರ್'. ಈ ಸಿನಿಮಾಗೂ ಕನ್ನಡಕ್ಕೂ ಒಂದು ಸಂಬಂಧವಿದೆ. ಅದೇನು ಗೊತ್ತೆ? ಲಕ್ಷ್ಮಿ ಪಾರ್ವತಿಯ ಪಾತ್ರದಲ್ಲಿ ನಟಿಸುತ್ತಿರುವವರು ಕನ್ನಡದ ಯಜ್ಞಾ ಶೆಟ್ಟಿ.

ಯುವನಟಿಯಾಗಿ ಮತ್ತು ಎಪ್ಪತ್ತು ವರ್ಷದ ವೃದ್ಧೆಯಾಗಿ ಎರಡು ಛಾಯೆ ಇರುವ ಪಾತ್ರದಲ್ಲಿ ಯಜ್ಞಾ ಕಾಣಿಸಿಕೊಳ್ಳಲಿದ್ದಾರೆ. ಈ ಪಾತ್ರಕ್ಕಾಗಿ ಅವರ ತಯಾರಿಯೂ ಜೋರಾಗಿಯೇ ಇದೆಯಂತೆ.

ಸದ್ಯಕ್ಕೆ ಚಿತ್ರದ ಪ್ರಿ–ಪ್ರೊಡಕ್ಷನ್ ಕೆಲಸ ನಡೆಯುತ್ತಿದೆ. ಫೆಬ್ರುವರಿಯಲ್ಲಿ ಚಿತ್ರೀಕರಣ ಪ್ರಾರಂಭಿಸುವ ಯೋಜನೆಯನ್ನು ಆರ್‌ಜಿವಿ ಹಾಕಿಕೊಂಡಿದ್ದಾರಂತೆ. ಅವರ ಈ ಪ್ರಯತ್ನಕ್ಕೆ ಎನ್‌ಟಿಆರ್ ಕುಟುಂಬದಿಂದ ವಿರೋಧ ವ್ಯಕ್ತವಾಗಿರುವ ಸುದ್ದಿಯೂ ಇದೆ.

# ಭಟ್ಟರ ಕೈಲಿ ಮತ್ತೆ ಗಾಳಿಪಟ

2008ರಲ್ಲಿ ಬಿಡುಗಡೆಯಾಗಿದ್ದ 'ಗಾಳಿಪಟ' ಸಿನಿಮಾ, ಯೋಗರಾಜ ಭಟ್ಟರ ಯಶಸ್ವಿ ಸಿನಿಮಾಗಳಲ್ಲೊಂದು. ಗಣೇಶ್, ರಾಜೇಶ್ ಕೃಷ್ಣನ್ ಮತ್ತು ದಿಗಂತ್ ನಾಯಕರಾಗಿ ನಟಿಸಿದ್ದ ಈ ಸಿನಿಮಾದಲ್ಲಿ ಡೈಸಿ ಬೋಪಣ್ಣ, ನೀತು ಮತ್ತು ಭಾವನಾ ರಾವ್ ನಾಯಕಿಯರಾಗಿ ನಟಿಸಿದ್ದರು.

ದಶಕದ ನಂತರ ಭಟ್ಟರು ಮತ್ತೊಮ್ಮೆ ಗಾಳಿಪಟದ ಸೂತ್ರ ಹಿಡಿಯಲು ಸಜ್ಜಾಗಿದ್ದಾರೆ. 'ಗಾಳಿಪಟ 2' ಸಿನಿಮಾವನ್ನು ಯೋಗರಾಜ ಭಟ್ ಅವರೇ ನಿರ್ದೇಶಿಸುತ್ತಿದ್ದು, ಶರಣ್, ರಿಷಿ, ಪವನ್ ಕುಮಾರ್ ನಾಯಕರಾಗಿ ನಟಿಸಲಿದ್ದಾರೆ.

ಯಶಸ್ಸಿನ ಬಾನಿನಲ್ಲಿ ಜೋರಾಗಿಯೇ ಹಾರಾಡಿದ ಹಳೆಯ ಸಿನಿಮಾದ ಹೆಸರನ್ನಷ್ಟೇ ಅವರು ಈ ಸಿನಿಮಾಗೆ ಬಳಸಿಕೊಳ್ಳುತ್ತಿದ್ದಾರೆ. ಹಾಗೆಂದು ಇದು ಹಳೆಯ ಕಥೆಯ ಮುಂದುವರಿಕೆ ಅಲ್ಲ. ಪಾತ್ರಗಳು, ಕಥೆಯ ಎಳೆ ಯಾವುದರಲ್ಲಿಯೂ ಹಿಂದಿನ ಪಟಕ್ಕೂ ಈಗಿನ ದಾರಕ್ಕೂ ಕಿಂಚಿತ್ ಹೋಲಿಕೆ ಇಲ್ಲ. ಹೊಸ ಬೆಗಡೆ, ಹೊಸ ಕಡ್ಡಿ, ಹೊಸ ದಾರಗಳನ್ನೇ ಇಟ್ಟುಕೊಂಡು ಬಾನಿಗೆ ತೂರಿಬಿಡಲು ಅವರು ಸಿದ್ಧರಾಗಿದ್ದಾರೆ. ಎಷ್ಟು ಹೊಸತು ಎಂದರೂ ಭಟ್ಟರ ಸಿನಿಮಾಗೆ ಕೆಲವು ಟ್ರೇಡ್‌ಮಾರ್ಕ್‌ಗಳು ಇರುತ್ತವಲ್ಲವೇ? ಅದು ಹೇಗೆ ಬದಲಾಗಲು ಸಾಧ್ಯ? ಹರೆಯದವರ ಎದೆಗೆ ಕೊಳ್ಳಿ ಇಡುವ ಕಥೆ, ಕಣ್ಮನ ತಣಿಸುವ ಲೊಕೆಶನ್‌ಗಳು, ತುಟಿಗಳಲ್ಲಿ ನಗುವನ್ನೂ, ಕಣ್ಣುಗಳಲ್ಲಿ ನೀರನ್ನೂ ಒಟ್ಟೊಟ್ಟಿಗೇ ತರಿಸುವ ಚುರುಕು ಡೈಲಾಗ್‌ಗಳು ಎಲ್ಲವೂ ಗಾಳಿಪಟದ ಬಣ್ಣಗಳಾಗಲಿವೆ.

ಮಹೇಶ್ ದನನ್ನಾವರ್ ಎನ್ನುವವರು ಈ ಚಿತ್ರಕ್ಕೆ ಹಣ ಹೂಡುತ್ತಿದ್ದಾರೆ. ಅರ್ಜುನ್ ಜನ್ಯ ಸಂಗೀತ ಹೊಸೆಯಲು ಸಜ್ಜಾಗಿದ್ದಾರೆ. ಸದ್ಯಕ್ಕೆ 'ಪಂಚತಂತ್ರ' ಚಿತ್ರದ ಬಿಡುಗಡೆ–ಪ್ರಚಾರ ಕೆಲಸದಲ್ಲಿ ಮಗ್ನರಾಗಿರುವ ಅವರು, ಮಾರ್ಚ್ ತಿಂಗಳಲ್ಲಿ ಚಿತ್ರೀಕರಣ ಆರಂಭಿಸುವ ಯೋಜನೆ ಹಾಕಿಕೊಂಡಿದ್ದಾರೆ. ಚಿತ್ರದ ಒಂದಿಷ್ಟು ಭಾಗವನ್ನು ವಿದೇಶದಲ್ಲಿ ಚಿತ್ರೀಕರಿಸುವ ಯೋಜನೆಯೂ ಅವರಿಗಿದೆ.







